**ಕಾರ್ಯನಿರ್ವಾಹಕ ನಿರ್ದೇಶಕರು**

☎ಫೋ. : 080-29776466
: 080-29776467

ಈಮೈಲ್: **bannerghattazoo@gmail.com**

**ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬನ್ನೇರುಘಟ್ಟ, ಬೆಂಗಳೂರು – 560 083**

ಸಂಖ್ಯೆ: ಎ3/ಬಬಪಾ/ಸಿಬ್ಬಂದಿ/ ಕಾಫಿ/ಚಹಾ/2020–21 ದಿನಾಂಕ : 09/02/2021

## ಸವಿವರ ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನದ ವಿವಿದ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪ್ರತಿ ದಿನ ಬೆಳಿಗ್ಗೆ ಹಾಗೂ ಸಂಜೆ ಕಾಫಿ/ಚಹಾ ವನ್ನು ಸರಬರಾಜು ಮಾಡಬೇಕಾದ ಅವಶ್ಯಕತೆಯಿರುತ್ತದೆ. ಈ ಸಂಬಂಧ ಆಸಕ್ತ ಸಂಸ್ಥೆ/ಗುತ್ತಿಗೆದಾರರಿಂದ ಒಂದು ವರ್ಷದವರೆಗೆ ಒದಗಿಸಲು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಇ–ಟೆಂಡರ್ ಮೂಲಕ (https://eproc.karnataka.gov.in, Dept. selection: Zoo Authority of Karnataka) ಟೆಂಡರುಗಳನ್ನು ಆಹ್ವಾನಿಸಲಾಗಿದೆ. **ಟೆಂಡರ್‌ಗಳನ್ನು ಸಲ್ಲಿಸುವ ಕೊನೆ ದಿನಾಂಕ 12–03–2021 ಮಧ್ಯಾಹ್ನ 4.00 ಗಂಟೆವರೆಗೆ. ಟೆಂಡರನ್ನು ದಿನಾಂಕ 15–03–2021 ಬೆಳಿಗ್ಗೆ 11:30 ಗಂಟೆಗೆ ತೆರೆಯಲಾಗುವುದು.** ಇ.ಎಂ.ಡಿ. ಮೊತ್ತ **ರೂ. 50,000/–**ಗಳನ್ನು ಇ–ಪೋರ್ಟಲ್‌ನಲ್ಲಿರುವ ಸೂಚನೆಗಳ ಪ್ರಕಾರ ಒದಗಿಸತಕ್ಕದ್ದು. ಇತರೆ ಷರತ್ತುಗಳು ಈ ಕೆಳಕಂಡಂತಿರುತ್ತವೆ

1. ಟೆಂಡರ್ ಗುತ್ತಿಗೆ ಅವದಿಯು ಟೆಂಡರ್ ಮಂಜೂರಾತಿ ಪಡೆದ ದಿನಾಂಕದಿಂದ ಒಂದು ವರ್ಷದವರೆಗೆ ಅಥವಾ ಮುಂದಿನ ಟೆಂಡರ್ ಇತ್ಯರ್ಥವಾಗುವವರೆಗೆ ಚಾಲ್ತಿಯಲ್ಲಿರುತ್ತದೆ. ಆಡಳಿತಾತ್ಮಕ ಕಾರಣಗಳಿಂದ ಟೆಂಡರ್ ಇತ್ಯಾರ್ಥವಾಗುವುದು ತಡವಾದಲ್ಲಿ ಸಂಬಂದಿಸಿದ ದಿನಾಂಕಗಳನ್ನು ಪರಿಷ್ಕರಿಸಿ ತಿಳಿಸಲಾಗುವುದು.
2. ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಮೂಲಕ ಸಲ್ಲಿಸಬೇಕಾಗಿದ್ದು, ಬೇರೆ ಯಾವುದೇ ರೀತಿಯಲ್ಲಿ ಸಲ್ಲಿಕೆಯಾಗಿರುವ ಟೆಂಡರನ್ನು ಪರಿಗಣಿಸುವುದಿಲ್ಲ.
3. ಇ.ಎಂ.ಡಿ ಹಾಗೂ ಟೆಂಡರ್ ಫೀ ಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬೇಕು. ಪಾವತಿಸುವ ವಿಧಾನ
    1. ಕ್ರೆಡಿಟ್ ಕಾರ್ಡ್
    2. ಡೆಬಿಟ್ ಕಾರ್ಡ್
    3. ಎನ್‌ಇಫ್‌ಟಿ
    4. ಒಟಿಸಿ

   ಹೆಚ್ಚಿನ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಘಟಕದ ದೂರವಾಣಿ ಸಂಖ್ಯೆ 080-22371090/ 22340060/22340948 ಯಿಂದ ಪಡೆಯಬಹುದಾಗಿರುತ್ತದೆ.
4. **ಗುತ್ತಿಗೆದಾರರು ಒಂದು ಕಪ್ ಕಾಫಿ/ಚಹಾಕ್ಕೆ ಎಲ್ಲಾ ತೆರಿಗೆಗಳನ್ನು ಸೇರಿ ಒಟ್ಟು ಮೊತ್ತವನ್ನು ದಾಖಲಿಸತಕ್ಕದ್ದು.**
5. ಗುತ್ತಿಗೆದಾರರು ವಿಳಾಸ ಪುರಾವೆ, ಆಧಾರ್, ಪಾನ್‌ಕಾರ್ಡ್‌ನ ಪ್ರತಿ ಹಾಗೂ 2018–19 ಮತ್ತು 2019–20 ನೇ ಸಾಲಿನ ಆದಾಯ ತೆರಿಗೆ ರಿಟರ್ನ್ಸ್ ಪ್ರತಿಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬೇಕು.
6. ಜಯಶೀಲರಾದ ಟೆಂಡರುದಾರರು ಟೆಂಡರಿನಲ್ಲಿ/ಸಂದಾನದಲ್ಲಿ ಇತ್ಯಾರ್ಥವಾದ ದರದಂತೆ ಕಾಫಿ/ಚಹಾ ಸರಬರಾಜು ಮಾಡುವ ಸಲುವಾಗಿ ರೂ. 200/–ಬೆಲೆಯ ಛಾಪಾ ಕಾಗದದಲ್ಲಿ ಕರಾರು ಬರೆದುಕೊಡತಕ್ಕದ್ದು.
7. ಜಯಶೀಲರಾದ ಟೆಂಡರುದಾರರ ಇ.ಎಂ.ಡಿ. ಅನ್ನು ಭದ್ರತಾ ಠೇವಣಿಯಾಗಿ ಪರಿವರ್ತಿಸಲಾಗುವುದು. ಹಾಗು ಕರಾರು ಅವಧಿ ತೃಪ್ತಿಕರವಾಗಿ ಮುಗಿದ ನಂತರ ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.

8. ಉತ್ತಮ ಗುಣಮಟ್ಟದ ಕಾಫಿ/ಚಹಾ ಸರಬರಾಜು ಮಾಡಬೇಕಾಗಿದ್ದು, ಕಾಫಿ/ಚಹಾ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಪರೀಕ್ಷಿಸಿ ಗುಣಮಟ್ಟವು ಕಳಪೆ ಆಗಿದ್ದಲ್ಲಿ ಸ್ಥಳದಲ್ಲಿಯೇ ಅದನ್ನು ತಿರಸ್ಕರಿಸುತ್ತಾರೆ. ಈ ಸಂಬಂಧ ಯಾವುದೇ ಪಾವತಿ ಮಾಡಲಾಗುವುದಿಲ್ಲ.

9. ಕಾಫಿ/ಚಹಾ ಅನ್ನು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳ – ಮೃಗಾಲಯ, ಸಫಾರಿ, ಚಿಟ್ಟೆ ಉದ್ಯಾನ ಹಾಗೂ ಪುನರ್ವಸತಿ ಕೇಂದ್ರಗಳಿಗೆ ಖುದ್ದು ಬೆಳಿಗ್ಗೆ 11:00 ಗಂಟೆ ಹಾಗೂ ಸಂಜೆ 3:00 ಗಂಟೆಯ ಸಮಯಕ್ಕೆ ಸರಬರಾಜು ಮಾಡತಕ್ಕದ್ದು.

10. ಕಾಫಿ/ಚಹಾ ಸರಬರಾಜು ಮಾಡಲು ವಾಹನದ ವ್ಯವಸ್ಥೆಯನ್ನು ಗುತ್ತಿಗೆದಾರರೇ ಮಾಡತಕ್ಕದ್ದು, ಯಾವುದೇ ಕಾರಣಕ್ಕೂ ಸಂಸ್ಥೆಯ ವತಿಯಿಂದ ವಾಹನದ ವ್ಯವಸ್ಥೆ ಮಾಡಲಾಗುವುದಿಲ್ಲ.

11. ಕಾಫಿ/ಚಹಾ ಸರಬರಾಜು ಮಾಡಿರುವ ಬಾಬ್ತು ಪಾವತಿಗಾಗಿ ಪ್ರತಿ ಮಾಹೆಯಲ್ಲಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳ ಮೂಲಕ ಬಿಲ್ಲನ್ನು ದೃಡೀಕರಿಸಿ ಸಲ್ಲಿಸುವುದು.

12. ಟೆಂಡರನ್ನು ಒಪ್ಪಿಕೊಳ್ಳುವ, ತಿರಸ್ಕರಿಸುವ ಅಥವಾ ಲೈಸೆನ್ಸ್ ಶುಲ್ಕದ ಮೊತ್ತವನ್ನು ಸಂದಾನ ಮಾಡುವ ಹಕ್ಕು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಇರುತ್ತದೆ.

13. ಈ ಸಂಸ್ಥೆ ಮತ್ತು ಟೆಂಡರ್‌ದಾರರ ಮಧ್ಯೆ ಗುತ್ತಿಗೆ ಅವಧಿಯಲ್ಲಿ ಉದ್ಭವಿಸಬಹುದಾದ ತಕರಾರುಗಳು ಏನಾದರೂ ಇದ್ದಲ್ಲಿ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರಲ್ಲಿ ಬಗೆಹರಿಸಿಕೊಳ್ಳತಕ್ಕದ್ದು.

**ಸೆಡ್ಯೂಲ್**

| ಕ್ರ. ಸಂ | ವಿವರ | ಸಮಯ | ಪ್ರಮಾಣ | ಷರಾ |
|---|---|---|---|---|
| 1 | ಕಾಫಿ/ಚಹಾ ಅನ್ನು ಸರಬರಾಜು ಮಾಡುವುದು | ದಿನಕ್ಕೆ ಎರಡು ಬಾರಿ | ಅಂದಾಜು 300 ಕಪ್ ಒಂದು ಹೊತ್ತಿಗೆ | • ಸ್ವಾದಿಷ್ಟ, ಉತ್ತಮ ಗುಣಮಟ್ಟದ ಕಾಫಿ/ಚಹಾ ಅನ್ನು ಸರಬರಾಜು ಮಾಡುವುದು.<br>• ಸರಬರಾಜು ಮಾಡುವ ಕಾಫಿ/ಚಹಾ ಕನಿಷ್ಟ 100 ಮೀ. ಲೀ/ ಪ್ರತಿ ಕಪ್ ಇರಬೇಕು |

**ಕಾರ್ಯನಿರ್ವಾಹಕ ನಿರ್ದೇಶಕರು**
**ಬನ್ನೇರುಘಟ್ಟ ಜೈವಿಕ ಉದ್ಯಾನವನ**
**ಬನ್ನೇರುಘಟ್ಟ, ಬೆಂಗಳೂರು**